ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ನ್ಯಾಯಾಲಯ, ಉಡುಪಿ.

ಸಿ.ಸಿಃ 1296/2024
ಚಾ. ಸಾ 06
ಫ್ರಾ.ಸಾ 07

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರಕಾಶ್ ಕೆ ಎಸ್ |
| ತಂದೆಯ ಹೆಸರು | : | ಕೆ ಎಂ ಶಿವರುದ್ರಪ್ಪ |
| ವಯಸ್ಸು | : | 58 |
| ಉದ್ಯೋಗ | : | ತುರ್ತು ಚಿಕಿತ್ಸಾ ವೈದ್ಯಾಧಿಕಾರಿ ತೀರ್ಥಹಳ್ಳಿ |
| ವಾಸಸ್ಥಳ | : | ತೀರ್ಥಹಳ್ಳಿ |

ದಿನಾಂಕಃ 30-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2016 ರಿಂದ 2025 ರವರೆಗೆ ಉಡುಪಿಯ ಜಿಲ್ಲಾ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸಾ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ .

01-02-2021 ರಂದು ಸಮಯ ಮದ್ಯಾಹ್ನ 12.50 ರಲ್ಲಿ ಶೋಬಾ W/o ವಿಶ್ವಾನಾಥನ್ 68 ವರ್ಷ ವಯಸ್ಸು ಹೊನ್ನಪ್ಪ ಕುದುರು ವಿಳಾಸ ರವರು ಸರಸ್ವತಿ ಮತ್ತು ಆಕೆಯ ಮಗಳು ವಿಜಯ ಎನ್ನುವವರು ಹಲ್ಲೆ ಮಾಡಿರುತ್ತಾರೆ ಎಂಬ ಹಿನ್ನಲೆಯಲ್ಲಿ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದರು ಅವರನ್ನು ಪರೀಕ್ಷಿಸಲಾಗಿ ಅವರಿಗೆ ಈ ಕೆಳಗಂಡ ಗಾಯಗಳು ಕಂಡುಬಂದಿರುತ್ತದೆ .

1. ಬಾಯಿ ಒಳಗೆ (ಕೆನ್ನೆಯ ಒಳಭಾಗದಲ್ಲಿ ) 2X 1 ಸೆಂಟಿ ಮೀ ಅಳತೆಯ ರಕ್ತ ಹೆಪ್ಪುಗಟ್ಟಿದ ಗಾಯವಾಗಿತ್ತು .

2. 2X 1 ಸೆಂಟಿ ಮೀ ನ ಅಳತೆಯ ತರಚಿದ ಗಾಯ ಎಡಕಾಲಿನಲ್ಲಿ ಆಗಿತ್ತು .

3. ಮೂಗಿನ ಮೇಲೆ 1 ಸೆಂ ಮೀ ಉದ್ದದ ತರಚಿದ ಗಾಯವಾಗಿತ್ತು

4. ಎಡತೋಳಿನ ಮೇಲೆ 2 ಸೆಂಟಿ ಮೀ ಉದ್ದದ ಗೀರಿದ ಗಾಯವಾಗಿತ್ತು .

ಗಾಯಾಳವನ್ನು ನಾನು ಪರೀಕ್ಷಿಸಿ ಚಿಕಿತ್ಸೆ ಕೊಟ್ಟು ನಂತರ ಹಲ್ಲಿನ ವೈದ್ಯರ ಬಳಿ ಹೋಗುವಂತೆ ಹೇಳಿರುತ್ತೇನೆ . ಮೇಲ್ಕಂಡ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿರುತ್ತದೆ . ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರ ಕೊಟ್ಟಿದ್ದು ಅದನ್ನು ಈಗಾಗಲೇ ನಿಪಿ 5 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-5(ಬಿ ) ಎಂದು ಗುರುತಿಸಲಾಯಿತು .

ಪಾಟೀ ಸವಾಲು **:** ಆರೋಪಿತರ ಪರ ವಕೀಲರಿಂದ

ಯಾವುದೇ ವ್ಯಕ್ತಿ ಒಂದು ಒರಟಾದ ಪ್ರದೇಶದ ಮತ್ತು ಗಿಡಗಂಟಿ ಇರುವ ಜಾಗದಲ್ಲಿ ಬಿದ್ದರೇ ಮೇಲ್ಕಂಡ ಗಾಯಗಳು ಆಗುವ ಸಂಭವ ಇರುತ್ತದೆ ಎಂದರೆ ಸರಿ. ನಾನು ಗಾಯಳುಗಳನ್ನು ಮದ್ಯಾಹ್ನ 12.50 ರ ಸಮಯದಲ್ಲಿ ಪರೀಕ್ಷಿಸಿರುತ್ತೇನೆ. ಸರಸ್ವತಿ ಎನ್ನುವವರನ್ನು 11.24 ರ ಸಮಯದಲ್ಲಿ ಪರೀಕ್ಷಿಸಿರುತ್ತೇನೆ ಎಂದರೆ ಸರಿ . ಸರಸ್ವತಿ ರವರು ನಮ್ಮ ಆಸ್ಪತ್ರೆಗೆ ಬಂದಾಗ ವಿಶ್ವನಾಥ್ ಎನ್ನುವವರು ಮತ್ತು ಇತರರು ಹಲ್ಲೆ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಸರಸ್ವತಿಯನ್ನು ಪರೀಕ್ಷಿಸಿ ನಾನು ಗಾಯದ ಪ್ರಮಾಣ ಪತ್ರ ಕೊಟ್ಟಿರುತ್ತೇನೆ ಎಂದರೆ ಸರಿ . ಸಾಕ್ಷಿಗೆ ಈ ಬಗ್ಗೆ ಒಂದು ದೃಢಿಕೃತ ಗಾಯದ ಪ್ರಮಾಣ ಪತ್ರ ತೋರಿಸಲಾಗಿ ಸಾಕ್ಷಿ ದಾಖಲೆಯನ್ನು ನೋಡಿ ತನ್ನ ಸಹಿಯನ್ನು ಒಪ್ಪಿಕೊಂಡ ಮೇರೆಗೆ ಸದರಿ ದಾಖಲೆಯನ್ನು ನಿಡಿ-2 ಎಂದು ಗುರುತಿಸಲಾಯಿತು . ಒಂದನೇ ಆರೋಪಿಗೆ ಎಡಕಿವಿ ಹರಿದು ರಕ್ತ ಗಾಯವಾಗಿತ್ತು ಎಂದರೆ ಸರಿ. ಸರಸ್ವತಿಯ ಎಡಕಿವಿಯಲ್ಲಿ ಓಲೆ ಇತ್ತೋ ಇಲ್ಲವೋ ಎಂದು ನೆನಪಿಲ್ಲ . ಪಿರ್ಯಾದಿ ಒತ್ತಡಕ್ಕೆ ಒಳಗಾಗಿ ನಾನು ನಿಪಿ 5 ಗಾಯದ ಪ್ರಮಾಣ ಪತ್ರ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ**.**

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾಮತ್ತು ಸಿ.ಜೆ.ಎಂ
ಉಡುಪಿ.